**- 04 -**

**ದಿನಾಂಕ 11-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:-** ವಾದಿ ಪರ ಶ್ರೀ ಎಸ್.ಜಿ. ವಕೀಲರಿಂದ.

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

1) ದಿ.18-04-2022 ರ ಖರೀದಿ ಕರಾರು ಪತ್ರವನ್ನು ನಿಪಿ-1 ಎಂದು, ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು, ಕರಾರು ಪತ್ರ ಬರೆದುಕೊಟ್ಟವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು, ಸದರಿ ಕರಾರು ಪತ್ರಕ್ಕೆ ಸಮ್ಮತಿ ಸಾಕ್ಷಿದಾರರೆಂದು ಮಲ್ಲಯ್ಯ ಹೆಬ್ಬೆರಳಿನ ಗುರುತನ್ನು ಹಾಕಿದ್ದು ರಾಮಪ್ಪ ಸಹಿ ಹಾಕಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ರಾಮಪ್ಪನ ಸಹಿಯನ್ನು ನಿಪಿ-1(ಸಿ) ಎಂದು ಬಸವರಾಜ ಮತ್ತು ಸಂಗನಗೌಡ ಇವರ ಸಹಿಗಳನ್ನು ನಿಪಿ-1(ಡಿ) ಮತ್ತು 1(ಇ) ಎಂದು ಗುರುತಿಸಲಾಯಿತು.

2) ಸರ್ವೆ ನಂ.69/2 ರ ಪಹಣಿಯನ್ನು ನಿಪಿ-2 ಎಂದು

3) ಸರ್ವೆ ನಂ.69 ರ 3 ಪುಟದ 1 ಪಹಣಿಯನ್ನು ನಿಪಿ-3 ಎಂದು

4) ನೋಟಿಸ್ ಪ್ರತಿಯನ್ನು ನಿಪಿ-4 ಎಂದು

5) ಅಂಚೇ ಇಲಾಖೆಯ ದಾಖಲೆಗಳನ್ನು ನಿಪಿ-5 ರಿಂದ 7 ಎಂದು ಗುರುತಿಸಲಾಯಿತು.

**ಪಾಟೀ ಸವಾಲು:-** ಪ್ರಕರಣ ಏಕ ತರ್ಫಿಯಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.